# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್.ರಸ್ತೆ, ತುಮಕೂರು - 572 103

ಸಂಖ್ಯೆ:ತುವಿ:ಶೈವಿ:2026-27:/1854 ದಿನಾಂಕ:19.08.2026

## :ಪರಿಷ್ಕೃತ ಅಧಿಸೂಚನೆ:

ವಿಷಯ:- ಸ್ನಾತಕ ಪದವಿ ಪಠ್ಯಕ್ರಮದಲ್ಲಿ ಪ್ರಥಮ ಮತ್ತು ದ್ವಿತೀಯ ವರ್ಷದಲ್ಲಿ Compulsory Courses ನ ಅಡಿಯಲ್ಲಿ ಪರಿಚಯಿಸಿರುವ ಕಡ್ಡಾಯ ಪತ್ರಿಕೆಗಳ ಬಗ್ಗೆ.

ಉಲ್ಲೇಖ:-1. ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ (ವಿಶ್ವವಿದ್ಯಾನಿಲಯಗಳು) ಆದೇಶ ಸಂಖ್ಯೆ ಇಡಿ:166:ಯುಎನ್ಇ:2023 ಬೆಂಗಳೂರು ದಿನಾಂಕ:08.05.2024.

2. ವಿಶೇಷ ಸಿಂಡಿಕೇಟ್ ಸಭಾ ನಡಾವಳಿ ದಿನಾಂಕ:16.04.2026.
3. ವಿವಿ ಪರಿಷ್ಕೃತ ಅಧಿಸೂಚನೆ ಸಂಖ್ಯೆ:ತುವಿ:ಶೈವಿ:2026-27/1781 ದಿನಾಂಕ:14.08.2026.
4. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:19.08.2026.

*****

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ತುಮಕೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಘಟಕ ಕಾಲೇಜುಗಳು ಮತ್ತು ಸಂಯೋಜಿತ ಕಾಲೇಜುಗಳಲ್ಲಿ 2026-27ನೇ ಶೈಕ್ಷಣಿಕ ಸಾಲಿನ ಹಾಗೂ ನಂತರದ ಶೈಕ್ಷಣಿಕ ಸಾಲುಗಳಿಗೆ ವಿವಿಧ ಸ್ನಾತಕ ಪದವಿಗಳಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಪರಿಸರ ಅಧ್ಯಯನ ವಿಷಯದ ಕಡ್ಡಾಯ ಪತ್ರಿಕೆಯನ್ನು 4ನೇ ಸೆಮಿಸ್ಟರ್‌ಗೆ ಅಳವಡಿಸಿಕೊಂಡು ಬೋಧಿಸುವಂತೆ ಉಲ್ಲೇಖ (03)ರಲ್ಲಿ ಅಧಿಸೂಚಿಸಲಾಗಿತ್ತು. ಉಲ್ಲೇಖ (01)ರ ಸರ್ಕಾರದ ಆದೇಶ ಉಲ್ಲೇಖ (02)ರ ಸಿಂಡಿಕೇಟ್ ಸಭಾ ನಿರ್ಣಯದಂತೆ ಉಲ್ಲೇಖ (03)ರಲ್ಲಿ ಹೊರಡಿಸಿರುವ ವಿಶ್ವವಿದ್ಯಾನಿಲಯದ ಪರಿಷ್ಕೃತ ಅಧಿಸೂಚನೆಯನ್ನು ಈ ಮೂಲಕ ಹಿಂಪಡೆಯಲಾಗಿದೆ.

ಮುಂದುವರೆದಂತೆ ಸ್ನಾತಕ ಪದವಿಯ ಪ್ರೋಗ್ರಾಂ ವಿನ್ಯಾಸದ ಅನುಸಾರ Compulsory Courses ನ ಅಡಿಯಲ್ಲಿ ಪರಿಚಯಿಸಲ್ಪಟ್ಟಿರುವ Constitutional Values-I ಮತ್ತು Constitutional Values-II ಪತ್ರಿಕೆಗಳನ್ನು ವಿವಿಧ ಸ್ನಾತಕ ಪದವಿಗಳಲ್ಲಿ ಕ್ರಮವಾಗಿ 1 ಮತ್ತು 2ನೇ ಸೆಮಿಸ್ಟರ್‌ಗೆ ಮತ್ತು ಪರಿಸರ ಅಧ್ಯಯನ ವಿಷಯವನ್ನು 4ನೇ ಸೆಮಿಸ್ಟರ್‌ಗೆ ಕಡ್ಡಾಯವಾಗಿ ಅಳವಡಿಸಿಕೊಳ್ಳುವಂತೆ ಉಲ್ಲೇಖ (04)ರ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಅಧಿಸೂಚಿಸಲಾಗಿದೆ.

ಆದೇಶದ ಮೇರೆಗೆ,

ಉಪಕುಲಸಚಿವರು
ಶೈಕ್ಷಣಿಕ ವಿಭಾಗ

ಇವರಿಗೆ,

1. ಪ್ರಾಂಶುಪಾಲರು, ಘಟಕ ಮತ್ತು ಸಂಯೋಜಿತ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ವಿಶ್ವವಿದ್ಯಾನಿಲಯ
2. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು - ಎಲ್ಲಾ ಕಾಲೇಜುಗಳಿಗೆ ಅಧಿಸೂಚನೆಯನ್ನು ತುಮಕೂರು ಇ-ಮೇಲ್ ಮುಖಾಂತರ ಕಳುಹಿಸುವುದು ಹಾಗೂ ಜಾಲತಾಣದಲ್ಲಿ ಪ್ರಕಟಿಸುವುದು.

ಪ್ರತಿಗಳು:

1. ಕುಲಸಚಿವರು (ಮೌಲ್ಯಮಾಪನ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
2. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
3. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
4. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
5. ಕಚೇರಿ ಪ್ರತಿ.